Mr. SPEAKER.—Sri Lakkappa is still a young man. (*Laughter*). That is my difficulty. Young men are always difficult of correction. Whoever can call the Revenue Minister's "reply" as a reply to the motion? He only intervened to explain Government's position.

(*Sri K. Lakkappa rose*).

Mr. SPEAKER.—Let the hon'ble member read the Rules again and come and meet me tomorrow. (*Laughter*).

ಶ್ರೀ ಎನ್. ಹುಚ್ಚಮಾಸ್ತಿಗೌಡ —ಸ್ವಾಮಿ, ಈ ನಿರ್ಣಯದಮೇಲೆ ಮಂತ್ರಿಗಳೂ ಸೇರಿ 53 ಜನ ಭಾಗವಹಿಸಿದ್ದಾರೆ. 16 ಡಿಸ್ಟ್ರಿಕ್ಟಿನಿಂದ ಬಂದಿರತಕ್ಕ ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ 40 ಕೋಟಿ ರೂಪಾಯಿ ಯೋಜನೆ, ಈಗಿರುವಂತೆ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳ ಪ್ರಕಾರ ಹಣವನ್ನು ಒದಗಿಸುತ್ತ ಹೋದರೆ, ಮುಗಿಯಲು 20 ವರ್ಷ ಬೇಕಾಗುತ್ತದೆ. ಆದುದರಿಂದ ಈ ಯೋಜನೆಯನ್ನು ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೇ ಮುಗಿಸಿ ಅಭಾವಸ್ಥಿತಿ ಮತ್ತೆ ಬಾರದಹಾಗೆ ಮಾಡಬೇಕು ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಾತ್ರ ಹೇಳಿ ಈ ನಿರ್ಣಯಕ್ಕೆ ಎಲ್ಲರೂ ಬೆಂಬಲವನ್ನು ನೀಡಿದ್ದಕ್ಕಾಗಿ ನಾನು ಅವರೆಲ್ಲರಿಗೂ ಆಭಾರಿಯಾಗಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—As I can gather from the Debate, the opinion on the motion seems to be unanimous. I do not think there is any need to put it to the vote of the House.

(*The House assented*)

THE MYSORE FAMINE RELIEF FUND BILL, 1962.

Motion to consider.

Sri M. V. KRISHNAPPA (Minister for Revenue).—Sir, I beg to move;

"That the Mysore Famine Relief Fund Bill, 1962, be taken into consideration."

Mr. SPEAKER.—Motion moved:

"That the Mysore Famine Relief Fund Bill, 1962 be taken into consideration."

I think, there is nothing for the Hon'ble Minister to say about this.

4-30 P.M.

† ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು II).—ಮಾನ್ಯ ಅಧ್ಯಕ್ಷರೇ, ಈ ಕ್ಷಾಮ ನಿವಾರಣ ಮಸೂದೆಯ ಬಗ್ಗೆ ಮಾತನಾಡುವಾಗ ಬಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ನಾನು ಬಯಸುತ್ತೇನೆ. ಮೊದಲನೇಯದು ಏನೆಂದರೆ, ಶ್ರೀಮಾನ್ ಹುಚ್ಚಮಾಸ್ತೀಗೌಡರು ತಂದಿದ್ದ ನಿರ್ಣಯದ ಮೇಲೆ ಅವರು ಮತ್ತು ಮಾನ್ಯ ಮಂತ್ರಿಗಳು ಕೊಟ್ಟಿರುವ ವಿವರಕ್ಕೆ ಈ ಬಿಲ್ಲು ಕೂಡ ಸಾಧಕವಾಗಿ ಬಂದಿದೆ. ಆ ನಿರ್ಣಯದ ಬಗ್ಗೆ ಒಳ್ಳೇ ಚರ್ಚೆ ಮಾಡಿದ್ದಾರೆ. ಸಾಧಾರಣವಾಗಿ 50 ಜನ ಸದಸ್ಯರು ಮಾತನಾಡಿದ್ದಾರೆ. ಸರಿಯಾಗಿ ಕೆಲಸ ಮಾಡಿ ಇನ್ನು ಮುಂದೆ ದೇಶದಲ್ಲಿ ಬರಗಾಲ ಬಾರದ ಹಾಗೆ ಕೆಲಸ ಮಾಡಲಿಕ್ಕೆ ಅನುಕೂಲವಾದರೆ ಅದು ಒಳ್ಳೆಯದು. ಅದೇ ಹೊತ್ತಿಗೆ ಇದರ ಬಗ್ಗೆ ಕೇಂದ್ರ ಸರಕಾರದ ಗಮನ ಸೆಳೆಯಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಮೈಸೂರು ರಾಜ್ಯದಲ್ಲಿ ಬರಗಾಲ ಹೋಗಿಲ್ಲ. ಕ್ಷಾಮ ಡಾಮರುಗಳು ಇದ್ದೇ ಇವೆ. ಈ ಕಡೆ

(ಶ್ರೀ ಎ. ಕೃಷ್ಣ ಶೆಟ್ಟಿ)

ಗಮನ ಸೆಳೆದು ಕೇಂದ್ರದಿಂದ ಹೆಚ್ಚು ಹಣ ಸಹಾಯ ಪಡೆದು ಸರಿಯಾಗಿ ಕೆಲಸ ಮಾಡಿದರೆ ಅದು ಒಳ್ಳೆಯದು. ಬೇರೆ ಕಡೆ ಮಂತ್ರಿ ಮಂಡಳ ಗಾತ್ರ ಕಡಮೆಯಾಗುತ್ತಿರುವಾಗ್ಗೆ ಇಲ್ಲಿ ಕ್ಷಾಮ ಡಾಮರು ಬೆಳೆಯುತ್ತಿರುವುದರಿಂದ ದೇವರೇ ಇಂಥ ಸರಕಾರ ಉಳಿಯ ಬಾರದು. ಈಗ ಈ ಪ್ರಶ್ನೆಯನ್ನು ಪರಿಹರಿಸಲಿಕ್ಕೆ ಸರಕಾರ ತೆಗೆದು ಕೊಂಡಿರುವ ಕ್ರಮದಲ್ಲಿ ಯಾವ ಮುಖ್ಯ ಉದ್ದೇಶ ಇದೆ ಎಂಬುದನ್ನು ನಾವು ನೋಡುತ್ತೇವೆ. ತಾತ್ಕಾಲಿಕ ದೃಷ್ಟಿಯಿಂದ ತೆಗೆದುಕೊಳ್ಳುವ ಕ್ರಮ ಸರಿಯಾಗಿದ್ದರೂ ಅದು ಒಳ್ಳೆಯದಲ್ಲ ಎಂದು ಹೇಳುವುದು ನನ್ನ ಅಭಿಪ್ರಾಯ. ದೊಡ್ಡ ದೊಡ್ಡ ಯೋಜನೆಗಳಿಗೆ ಸಂಬಂಧಪಟ್ಟ ನೀರಾವರಿ ಯೋಜನೆಗಳನ್ನು ಸರಕಾರ ಪಾರ್ಟಿ ದೃಷ್ಟಿಯಿಂದ ತೆಗೆದುಕೊಳ್ಳುವುದು ಸರಿಯಲ್ಲ. ಸಣ್ಣ ನೀರಾವರಿ ಯೋಜನೆಯಾಗಲಿ ಬಾವಿ, ಕರೆ ಮಾಡಿಸುವುದು ಆಗಲಿ ಈ ಯೋಜನೆಗಳನ್ನು ನಡೆಸುವುದರಲ್ಲಿ ಸಾಮೂಹಿಕವಾಗಿ ಕೆಲಸ ಮಾಡಿಲ್ಲ. ದೇಶದ ಹಿತ ದೃಷ್ಟಿಯಿಂದ ಕೆಲಸ ಮಾಡುತ್ತಿಲ್ಲ. ಯಾರಿಗೆ ಅನುಕೂಲ ಮಾಡಿಕೊಟ್ಟರೆ ಲಾಭ ಬರುತ್ತದೆಯೋ ಅಂಥವರ ಸ್ಥಿತಿ ಉತ್ತಮಗೊಳಿಸಲು ಸರಕಾರದ ಕೆಲವು ಸೌಲಭ್ಯಗಳನ್ನು ಕೊಡುವುದು ನಡೆದುಕೊಂಡು ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ತುಂಬಾ ಬಾವಿ ತೋಡಿದ್ದಾಗಿದೆ. ಸರಕಾರ ಸಹಾಯ ಮಾಡಿದೆ. ಆದರೂ ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಅಭಾವ ಇದೆ. ಸರಕಾರದ ಸಹಾಯವನ್ನು ಅಡಿಕೆ ತೋಟ ಬೆಳೆಸಲು ಭೂಮಾಲೀಕರು ಉಪಯೋಗಿಸಿಕೊಳ್ಳುತ್ತಾರೆ. ಎರಡು ಗದ್ದೆ ಇದ್ದರೆ ಅಡಿಕೆ ತೋಟ ಮಾಡಲು ಪಂಪುಸೆಟ್ಟು ತರುತ್ತಾರೆ. ಬಾವಿ ಉಪಯೋಗ ಮಾಡುವುದಿಲ್ಲ. ಈ ರೀತಿ ಕರಾವಳಿ ಪ್ರದೇಶ ಬಿಟ್ಟು ಒಳ ಪ್ರದೇಶದಲ್ಲಿ ಉಪಯೋಗ ಮಾಡಿದ್ದಾರೆ. ಈ ಸಹಾಯವನ್ನು ಆಹಾರ ಸಂಪತ್ತನ್ನು ಹೆಚ್ಚಿಸಲು ಅಳವಡಿಸಿಕೊಳ್ಳಬೇಕಾಗಿತ್ತು. ಆದರೆ ಕಮರ್ಷಿಯಲ್ ಕ್ರಾಪ್ ಬೆಳೆಯಲು ಪಂಪುಸೆಟ್ ಹಾಕಿದ್ದಾರೆ. ಇದರಿಂದ ಆಹಾರ ಧಾನ್ಯ ಬೆಳಸಲಿಕ್ಕೆ ಪ್ರಯೋಜನಕಾರಿಯಾಗಿಲ್ಲ. ಆಹಾರ ಧಾನ್ಯ ಬೆಳೆಸಲು ಉಪಯೋಗಿಸಿದ ಹಣ ಒಂದು ಬಿಂದು ಮಾತ್ರ ಆಗಿದೆ ಎಂದು ಹೇಳಬಹುದು. ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದುದು ಅಗತ್ಯ. ಈ ಮೊದಲೇ ಭೂ ಸುಧಾರಣೆ ಮಸೂದೆ ಜಾರಿಗೆ ತಂದು ಜನರ ಸ್ಥಿತಿ ಉತ್ತಮ ಪಡಿಸಲು ಕೆಲಸ ಮಾಡಿದ್ದರೆ ಇಂಥ ಪ್ರಶ್ನೆ ಇಂದು ನಮ್ಮ ಮುಂದೆ ಇರುತ್ತಿರಲಿಲ್ಲ. ಇಷ್ಟು ಹಣ ಖರ್ಚು ಮಾಡುವುದು ಉಳಿತಾಯವಾಗುತ್ತಿತ್ತು ಮತ್ತು ಪ್ರಯೋಜನವಾಗುತ್ತಿತ್ತು ಎಂದು ನನ್ನ ಬಲವಾದ ಅಭಿಪ್ರಾಯ. ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಪ್ರಕೃತಿ ಶಕ್ತಿ, ವಿಜ್ಞಾನ ಶಕ್ತಿಯಿಂದ ಮನುಷ್ಯನ ಅಧೀನಕ್ಕೆ ಹತ್ತಿರ ಹತ್ತಿರ ಬರುತ್ತಿದೆ ಎಂದು ಹೇಳಿದರು. ಇವೊತ್ತು ಬೆಂಗಳೂರಿನಲ್ಲಿ ಒಂದು ಕೈಗಾರಿಕೆಯ ಕಾರ್ಖಾನೆಯಲ್ಲಿ ರಡರ್ ತಯಾರಿಸುವ ಸ್ಥಿತಿ ಬಂದಿದೆ. ವಿಜ್ಞಾನದ ಸಹಾಯದಿಂದ ಕ್ಷಾಮ ನಿವಾರಣೆಯಾಗಬೇಕು. ಅದಕ್ಕೆ ಹೊಂದಿಕೊಂಡು ಬಂದಿದೆಯೇ? ಇಲ್ಲ. ವಿಜ್ಞಾನದ ಸಹಾಯದಿಂದ ನೈಜೀರಿಯಾ ಮರು ಭೂಮಿ ಒಂದು ಫಲವತ್ತಾದ ಪ್ರದೇಶವಾಗಿದೆ. ನೀರು ತೆಗೆದುಕೊಂಡು ಹೋಗುವುದರಲ್ಲಿ ಒಂದು ದೊಡ್ಡ ಯೋಜನೆ ಮಾಡಿದ್ದಾರೆ. ನದಿಗೆ ಒಡ್ಡು ಹಾಕಿ ದಂಡೆಯ ಮೇಲಿರುವ ಫಲವತ್ತಾದ ಪ್ರದೇಶ ಮುಳುಗಡೆಯಾಗುವಂತೆ ಮಾಡಿರುವುದಿಲ್ಲ. ನೀರನ್ನು ಕಾಲುವೆ ಮಾರ್ಗವಾಗಿ ಬಹು ದೂರದಿಂದ ತಂದಿದ್ದಾರೆ. ಆದರೆ ನಮ್ಮ ದೇಶದಲ್ಲಿ ಯಾವುದಾದರೂ ಒಂದು ನೀರಾವರಿ ಯೋಜನೆಯನ್ನು ಮಾಡಿದರೆ ಅಲ್ಲಿ ಬಹು ಫಲವತ್ತಾದ ಭೂಮಿ ಮುಳುಗಡೆಯಾಗುತ್ತದೆ. ಈ ರೀತಿ ಫಲವತ್ತಾದ ಭೂಮಿ ಮುಳುಗಡೆ ಮಾಡುವುದು ಸರಿಯಲ್ಲ. ಫಲವತ್ತಾದ ಭೂಮಿ ಹಾಳಾಗಿ ಹೋಗುವುದರಿಂದ ಪ್ರಯೋಜನವಿಲ್ಲ. ಈಜಿಪ್ತ, ರಷಿಯಾದಲ್ಲಿಯೂ ಇನ್ನೂರು ಮುನ್ನೂರು ಮೈಲಿ ಕಾಲುವೆ ಹಾಕಿ ನೀರು ತಂದಿದಾರೆ ಎಂದು ಕೇಳಿದ್ದೇನೆ. ಫಲವತ್ತಾದ ಭೂಮಿ ಮುಳುಗಡೆ ಮಾಡಿಲ್ಲ. ಆದ್ದರಿಂದ ಈ ಅಂಶ ಗಮನದಲ್ಲಿಟ್ಟುಕೊಳ್ಳಬೇಕಾದುದು ಅಗತ್ಯ. ಕೃಷ್ಣರಾಜಸಾಗರದಲ್ಲಿ ಲಕ್ಷಾಂತರ ಎಕರೆ ಭೂಮಿಯಲ್ಲಿ ವಾಟರ್ ಲಾಗಿಂಗ್ ಆಗುವುದು ಕಂಡು ಬಂದಿದೆ. ನಮ್ಮಲ್ಲಿ ವಾಟರ್ ಇಂಜಿನಿಯರ್ಸ್ ಎಷ್ಟು ಜನ ಇದ್ದಾರೆ? ಕೃಷ್ಣರಾಜ ಸಾಗರದಲ್ಲಿ ಎಷ್ಟು ನೀರು ಹಾಳಾಗುತ್ತಿದೆ? ಯಾವ ಕೆಲಸ ನಡೆಯುತ್ತಿದೆ? ಇಂಥ ವಿಷಯ ಸರಿಯಾಗಿ ನಡೆಯಬೇಕು. ನೀರಾವರಿ ಯೋಜನೆಗಳ ಕೆಲಸದಲ್ಲಿ ವಿಶಾಲ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕು. ನಮ್ಮ ಸಂಸ್ಥಾನದಲ್ಲಿ ಮಳೆ ಜೋರಾಗಿ ಬೀಳುತ್ತದೆ. ಅಸ್ಸಾಮ ಪ್ರಾಂತ ಬಿಟ್ಟರೆ ನಮ್ಮ ರಾಜ್ಯದಲ್ಲಿ ಎಲ್ಲಕ್ಕೂ ಹೆಚ್ಚು ಮಳೆಯಾಗುತ್ತದೆ.

ಶರಾವತಿ ಮುಳುಗಡೆ ಪ್ರದೇಶದಲ್ಲಾಗಲೀ, ಅಗುಂಬೆ ಘಾಟಿಯಲ್ಲಾಗಲೀ, ಮಡಕೇರಿಯಲ್ಲಾಗಲೀ ಕೊಡಗಿನಲ್ಲಾಗಲೀ ಇನ್ನೂ ಎಷ್ಟು ನೀರು ಪೋಲಾಗುತ್ತಿದೆ, ಸಮುದ್ರಕ್ಕೆ ಹೋಗಿ

ಸೇರುತ್ತಿದೆ ಎಂಬುದನ್ನು ತಿಳಿದುಕೊಳ್ಳಲಾಗಿದೆಯೇ ? ನೀರು ಹರಿದು ಹೋಗುವ ನಿಟ್ಟನ್ನೇ ಬೇರೆ ಕಡೆಗೆ ತಿರುಗಿಸಿ ಫಲವತ್ತಾದ ಪ್ರದೇಶವನ್ನಾಗಿ ಮಾಡಲಿಕ್ಕೆ ಏಕೆ ಸಾಧ್ಯವಿಲ್ಲ ? ಅದಕ್ಕೆ ಸರಿಯಾದ ಪರಿಪಕ್ವವಾದ ಒಂದು ಪಟ್ಟಿ ಇಲ್ಲವೇ ಎಂದು ಕೇಳುತ್ತೇನೆ. ಕೆಲವು ಕಡೆ ಸಮುದ್ರಕ್ಕೆ ಹೋಗಿ ಅನಾವಶ್ಯಕವಾಗಿ ಬೀಳತಕ್ಕ ನೀರನ ದಿಕ್ಕನ್ನೇ ತಿರುಗಿಸಿದ್ದಾದರೆ ವಿದ್ಯುಚ್ಛಕ್ತಿಯನ್ನೂ ಕೂಡ ಉತ್ಪಾದನೆ ಮಾಡಿಕೊಳ್ಳಬಹುದು. ಇದು ಒಂದು ಭಾಗವಾಯಿತು. ಇನ್ನೊಂದು ಭಾಗ ಅರಣ್ಯ ಉಂಟು ಎಷ್ಟೋ ರೀತಿಯಲ್ಲಿ ಹಾಳಾಗುತ್ತಾ ಇದೆ. ಕಾಡು ಇದ್ದುದ್ದು 7–8 ವರ್ಷಗಳಲ್ಲಿ ಅಲ್ಲಿದ್ದ ಮರಗಳನ್ನೆಲ್ಲಾ ಕಡಿದು ಹಾಕಿದುದರ ಪರಿಣಾಮವಾಗಿ ಸಾಯಿಲ್ ಇರೋಷನ್‌ಗೆ ಅವಕಾಶವಾಗಿದೆ. 10 ವರ್ಷದ ಹಿಂದೆ ನೋಡಿದ ಸ್ಥಳ ಈ ದಿನ ಅದರ ಗುರುತು ಸಿಕ್ಕದ ಹಾಗೆ ಪರಿವರ್ತನೆಯಾಗಿದೆ ಸಾಯಿಲ್ ಇರೋಷನ್ ಆಗುತ್ತಿರುವುದನ್ನು ತಡೆಗಟ್ಟದಿದ್ದ ಪಕ್ಷದಲ್ಲಿ ಭೂಮಿಯಲ್ಲಿರತಕ್ಕ ಶೀವವೆಲ್ಲಾ ಹೊರಟು ಹೋಗಿ ಭೂಮಿಯ ಸಾರ ಕಡಿಮೆಯಾಗುತ್ತಾ ಹೋಗುತ್ತಿದೆ, ಅದನ್ನು ತಡೆಗಟ್ಟುವುದು ಅಗತ್ಯ. ಪಶ್ಚಿಮ ಘಟ್ಟದಲ್ಲಿಯೂ ಕಾಡು ಇದ್ದುದ್ದೆಲ್ಲಾ ಅಳಿದು ಹೋಗಿ ಅಲ್ಲಿ ಕಾಡು ಇತ್ತೇ ಇಲ್ಲವೋ ಎಂಬ ಅನುಮಾನ ಬರುವಂತಾಗಿದೆ. ಸಾಯಿಲ್ ಇರೋಷನ್ ತಡೆಗಟ್ಟಲು ಆ ಪ್ರದೇಶದಲ್ಲಿ ಕೆಲವು ಮರಗಳನ್ನು ಪೋರ್ಚುಗೀಸರು ತಂದು ನೆಟ್ಟಿದ್ದುಂಟು ಎಂದು ಹೇಳವುದುಂಟು. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಮಾನವೀಯತೆಯಿಂದ ಈ ಕೆಲಸ ಕಾರ್ಯಗಳನ್ನು ಮಾಡದೇ ನಿರ್ಲಕ್ಷ್ಯ ಮಾಡಿಕೊಂಡು ಬಂದು ಈ ದಿವಸ ಇಡೀ ದೇಶದ ಅಭಿವೃದ್ಧಿಯ ಕಡೆಗೆ ಅವರ ದೃಷ್ಟಿ ಉಂಟೋ ಇಲ್ಲವೋ ಎಂಬ ಸಂಶಯ ಬರುತ್ತಿದೆ. ಇದನ್ನು ಸರಿಪಡಿಸಬೇಕಾದ ಅಗತ್ಯ ಉಂಟು.

ವಿದ್ಯುಚ್ಛಕ್ತಿಯ ವಿಷಯದಲ್ಲಿ ಹೇಳುವುದಾದರೆ, ಹತ್ತಾರು ಜನರಿಗೆ ಅನುಕೂಲವಾಗುವಂತಹ ಕಡೆ ಆಹಾರ ಬೆಳೆಗಳಿಗೆ ನೀರಿನ ಅನುಕೂಲವಾಗಲು ಬಾವಿಗಳಿಗೆ ಪಂಪು ಸೆಟ್ಟುಗಳನ್ನು ಹಾಕಲು ವ್ಯವಸ್ಥೆ ಮಾಡಿಕೊಡಬೇಕು ಮತ್ತು ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಆ ರೀತಿ ಮಾಡಿದರೆ ಪ್ರಯೋಜನವುಂಟು ಹಾಗಲ್ಲದೆ ಕ್ಷಾಮದ ನಿವಾರಣೆಗೆ ಒಂದು ಬಿಲ್ಲನ್ನು ತರುವುದರಿಂದ ಏನೂ ಪ್ರಯೋಜನವಿಲ್ಲ. ನಮ್ಮ ಪ್ರಾಂತ್ಯದವರೆಲ್ಲಾ ಒಟ್ಟಾಗಿ ಸೇರಿ ನಮ್ಮ ಪ್ರಾಂತ್ಯದ ಸಮಗ್ರ ದೃಷ್ಟಿಯಿಂದ ಈ ಆಹಾರ ಅಭಾವ ಸಮಸ್ಯೆಯನ್ನು ನಿವಾರಿಸಲು ಒಂದು ತಜ್ಞರ ಕಮಿಟಿಯನ್ನು ನೇಮಕ ಮಾಡಿ ನೀರಿನ ಸೌಲತ್ತು ಎಷ್ಟರ ಮಟ್ಟಿಗೆ ಒದಗಿಸಬೇಕು, ಎಂಬುದನ್ನು ಪರಿಶೀಲನೆಮಾಡಿ ನಮ್ಮಲ್ಲಿರುವ ನೀರು ಪೋಲಾಗದ ಹಾಗೆ ಏರ್ಪಾಡು ಮಾಡಿ ನಮ್ಮ ಬೆಳೆಗಳಿಗೆ ಅದನ್ನು ಅಳಪಡಿಸಿಕೊಂಡು ಹೆಚ್ಚು ಆಹಾರವನ್ನು ಬೆಳೆಯುವುದು ಮಾತ್ರವಲ್ಲದೆ ಆ ನೀರನ್ನು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೂ ಕೂಡ ಬಳಸಬಹುದೆಂಬ ದೃಷ್ಟಿಯಿಂದ ಈ ಬಿಲ್ಲನ್ನು ತಂದು ಆ ರೀತಿ ಏರ್ಪಾಡು ಮಾಡಿದ್ದರೆ ಉತ್ತಮವಾಗಿತ್ತು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri A. KRISHNA SHETTY.—Am I to cut short my speach, Sir,

Mr. SPEAKER.—Yes, There will be other opportunities for the Hon'ble Member to develop the fine points that he is mentioning.

†**Sri V. S. PATIL** (Belgaum I).—Sir, I have to pass some remarks so far as this Mysore Famine Relief Fund Bill 1962 is concerned. I do not want to mix up matters, the resolution that has already been adopted, or the grow more food that is going on in the country these are different subjects altogether and I should like to confine my attention to the mere provisions contained in this Bill. Otherwise, the other remarks according to me are completely irrelevant so far as the subject matter before the House is concerned.

In this Bill, Sir, a provision has been made to create a fund which is to be called the Mysore Famine Relief Fund established under section 3. In this Bill there is absolutely no definition as to when a particular tract is to be called famine-stricken, what is famine and when we can call a particular part of the State as famine-stricken.

Mr. SPEAKER.—Is there is no famine Code? Famine Code is a separate thing. This is only to give statutory approval to create a fund.

Sri V. S. PATIL.—My contention is when we are creating a fund for a specific purpose, that purpose must be defined by the Legislature in this Bill, not in the famine code prepared by the Government. That is a subsidiary thing after the Famine Relief Fund Bill is passed. These are powers given to the Government to prepare the code or rules. Here the fundamental thing is that all these important words must be defined by the Legislature and not by the Government. So, I submit, Sir, that there is no definition of what is famine, what is distress. Even this has not been defined and no distinction has been made in this Bill so far as these are concerned. And when these words are not defined, I do not understand why we should leave these matters to the sweet will and desire of the Government to define them and to apply the funds as they like. As the Hon'ble Minister just a few minutes before said—'one who makes more *galata* gets the funds'. Otherwise, that will come in the way of implementi g the provisions of this Act and in the way of spending the fund. So, in order to avoid such a contingency, we must define the word...

Mr. SPEAKER.- Has the Hon'ble Minister got a copy of the Bombay Famine Relief, Fund Act of 1936? I wanted to find out whether it was necessary to include it in this Statute.

Sri M. V. KRISHNAPPA.—The purpose of the Bill is merely to create a fund, just to enable the Government to create a fund. The Famine Act of Bombay is all out of use. If we follow the Bombay Famine Act, a labourer will have to be paid six annas or four annas. We are completely ignoring the famine Relief Act and following the usual measures,

Sri V. S. PATIL.—That is because those Acts were passed in 1936 when one could purchase 16 seers of jawar per rupee. Now we have to pay one rupee per seer.

Sri M. V. KRISHNAPPA.—Even otherwise, the old famine code was framed by the foreign Government and the provisions were very meagre. They only wanted to limit expenditure to the minimum.

Sri V. S. PATIL.—Those ideas are quite different, I do admit. But when we are preparing a new statute, why should we not get all those essential things included? I do not mean to say that the labourers should be paid less than what they actually require; that is a complete folly. We cannot follow the principles enunciated by the Britishers. Government is bound to feed the people if they are affected by famine or distress conditions. They must make provisions for works and give the affected people sufficient allowance, food, clothing, etc. I am not going to rely upon what the Britishers have done. Unless there is a definition, I feel that the draft Bill is not up to the point.

The second thing which I should like to bring to the notice of the Hon'ble Minister is that, they have not explained or given any hint regarding the actual amount that is in the hands of the Government and which relates to this particular fund from the other States. Sub-clauses (1) and 2) of clause 3 deal with this subject. The other thing is about spending as manual in clause 4. That Clause read, "the Fund

shall be expended only upon relief of famine in the State and the relief of distress caused by drought, flood, fire or other natural calamities in the State." Here it appears that the intention of the Government is that this fund is to be touched when there these conditions exist; that is to say, when there is famine or distress caused by so many things. But the trend of the whole House was, when we discussed the resolution on this subject, the prevention of famine or distress is much more important than just rendering help. We must take steps first of all for prevention of famine or distress and for that purpose, there is no provision made in this Bill. I should like to be enlightened by the Honourable Minister as to whether this Famine Relief Fund can be expended for prevention of famine or distress. We have got some money from the integrated areas. Whether this Fund is used for those purposes or not, is the point for consideration. It is not for prevention but only for relief. Why should we not spend from this Fund for the benefit of the areas which are likely to be affected by distress or famine ? Why should we merely depend upon the *'galata'* of people to get money for digging of wells or having tanks repaired, etc? The integrated plan of about Rs. 40 crores for smaller tanks is very good ; but at the same time, a measure for prevention of famine or distress can be implemented. Why this Fund as well as that Fund are not amalgamated to achieve the same thing ?

In Clause 4, there is a proviso that "when the Fund exceeds Rs. 60 lakhs, the State Government may utilise the excess to meet expenditure on protective minor irrigation works and other works as may be prescribed, for the prevention of famine in the State, or for the grant of loans to cultivators either under the Land Improvement Loans Act, 1883 or under any corresponding law in force in any area of the State..." This is too much power given to the Government. This Fund is meant for relief of famine and these loans under the different Acts are not restricted to the famine area at all ; they can be given to the agriculturists throughout the State. I do not know why this fund is to be utilised for that purpose which is not covered by the provisions or the intentions of this particular piece of legislation. The most important thing is the last sentence of this proviso. "Or to meet irrecoverable balances of loans granted under the said Acts or laws or for relief purposes." Here this *'galata'* business again comes because those who make *'galata'* take the money as loan and make another *'galata'*, press the Minister to get the remission. This remission business should not be there. It is troublesome not only to the Ministers personally but also troublesome to the Treasuries of the State. " Irrecoverable balances of loans " must be removed. It should not be given in the hands of the Government because they are creating this Fund for a specific purpose and it must be spent only for that purpose and for nothing else. When we pass this Bill, the amount will be a charge upon the Consolidated Fund of the State. It need not come for voting before this Assembly. Government will go on creating that Fund and making provision for that Fund because it is a charged item. We cannot vote for it ; at the

(SRI V. S. PATIL)

most wecan discuss it 25 lakhs as the minimum amount is being given to Government by this Bill. Even though it is a small Bill, it costs at least Rs. 25 lakhs a year.

MR. SPEAKER.—The Hon'ble Member may please read sub clause (3) of clause 6.

> "Any expenditure incurred by the State Government under sub-section (2) shall be charged on the Consolidated Fund of the State."

SRI V. S. PATIL. —Proviso to sub-clause (2):

> "Provided that if the deficiency exceeds twenty lakhs of rupees, it may be made up in annual instalments, the amount of such instalments except the last being not less than ten lakhs of rupees."

MR. SPEAKER.—So sub-clause (2) is a liability cost upon the Government to make up the deficit. It is that that is dealt with in sub-clause (3).

SRI V. S. PATIL.—When it is charged, it will not come before us for voting.

MR. SPEAKER.—What is that that will not come for voting?

5 P.M.

†SRI V. S. PATIL.—When a particular amount is sanctioned by statute, it becomes a charged item. We can discuss it but we are not entitled to vote.

MR. SPEAKER.—It is a charge in the sense that it is a liability upon the Government to keep the funds at a particular level.

SRI B. D. JATTI.—It is a charge on the consolidated fund to make up that amount.

SRI V. S. PATIL.—That means our vote is unnecessary at the time the amount is drawn from the Consolidated Fund. That is why I am saying that this expenditure should come here and be subject to our vote. Then we can criticise the actions of the Government.

MR. SPEAKER.—The very purpose of the Bill is to ensure that the fund is kept at a minimum level, below which it should not go. If there is excees, it goes to the General Fund and if there is defecit, it comes back. If the Hon'ble Member says that it should be subject to the vote, it will not be in the interest of the Fund itself.

SRI B. D. JATTI.—The context of the word "charged" used in the Bill is different. It is a liability on the Consolidated Fund to make up this amount and bring it to a particular level. We must always have that much money in the fund.

SRI V. S. PATIL.—My interpretation is that it will not be subject to the vote of the House. If that be the case, there is danger.

MR. SPEAKER.—Then what is the remedy?

Sri V. S. PATIL.—In every session, three or four times, Government comes before us for additional, supplementary grants. They can thus ask us to recoup the funds. If the matter comes before us we can ask details of the expenditure incurred by them, whether it was really spent for relief or for this '*Galata*'. We can question the Government.

Sri B. D. JATTI.—There is no head called '*Galata*'. (laughter).

Sri V. S. PATIL.—Sir, we are in a democratic set-up. The people are our masters. If there is scarcity or famine a duty must be imposed on the Government to see that the people are given work, not only work but maintenance. These duties must be mentioned in the Bill itself. Otherwise Government will shirk their responsibility like the Britishers. They are trained to shirk, at least their administration. Some sort of responsibility must be cast on the Government to see that the people are given jobs and maintenance. I do not say that doles should be given out. I am against doles in India. People must earn their livelihood and their wages.

† Sri D. PARAMESHWARAPPA.—Sir, I must say that the objects of the Bill are laudable and commendable. At the outset I must thank my friend Sri Hutchmasty Gowda for having brought a motion for discussion of the famine situation, which has culminated in this Bill.

We in India are accustomed to famines. They are not new. They have been occurring since a long time and I am aware of famine conditions even as early as 1918. We feel the magnitude of famines because of the increase in population at the rate of 2 per cent every year. We will have to take measurers to overcome the situation and fortunately human ingenuity has given us the means to fight famines and even avoid their occurrence.

I must say that the fund created in this Bill is insufficient. Some figure seems to have been arrived at at random. The Minister has obviously not studied the conditions in our State. Taking into account all factors in our State, I suggest the fund should not be less than 2 crores.

In my constituency, famine conditions exist. Though the idea of forming a fund is laudable, the Minister should meticulously make rules so that there would be no scope for any influence being brought to hear upon the officers who are to administer this fund. Only those who deserve help should be given help. In conditions of famine, it is the poor that become helpless because the affluent sections can afford to buy foodgrains at exhorbitant prices. Therefore the poor need help and the rules should ensure that they get the help they deserve. It is unfortunate that we depend upon other countries for foodgrains. We are every year importing foodgrains to the tune of crores of rupees. We should avoid this. Agriculture being most important to our economy, we must undertake permanent measures to put it on a firm footing. Various measures have already been suggested. Tanks should be repaired and constructed, the projects must be speeded up. It is not necessary for me to go into that aspect as they have

(SRI D. PARAMESHWARAPPA)

exhaustively suggested the measures by way of permanent improvements. With regard to temporary measures, that are to be contemplated just to overcome these famine conditions, some friends have also suggested that Takavi loans should be given, 'Ganji Kendras' should be opened and subsidies should be given to the ryots to purchase fodder for cattle. When famine conditions prevail, it is not famine to human beings only, but it is to cattle also. In order to provide fodder for the cattle, subsidies should be granted to ryots.

In my Taluk, this year, about 15 villages have been very badly affected, where there is absolutely no rainfall and I have made a representation to the Government also in this direction. I cannot understand the reason why the Government is so sluggish in providing necessary facilities. I request the Hon'ble Minister to consider this aspect very seriously and give immediate attention to this problem with refernce to my Taluk.

We will have to analyse further the various contributory factors to famine. There are so many contributory factors; it may be one to excess of rainfall or it may be one to total failure of rainfall. In my constituency it is due to total failure of rainfall in certain parts. I request the Hon'ble Minister to give due attention to this aspect. Another reason for famine conditions is that the lands may have been rendered fallow on account of the irrigation projects. That is also a contributory reason for famine. I have been representing to the concerned Minister that in my Taluk thousands of acres of land have been rendered unfit for cultivation by reason of irrigation projects because the lands have become alkaline and saline. Till now I have not been able to get any reply from the Government. I fail to understand why no action has been taken so far. Representations have been made by the agriculturist ryots, who have been subjected to these conditions, that remission of 'Kandayam' should be given because they are not getting any benefit out of this land to the extent of nearly more than a thousand acres. Under such circumstances, are we morally justified in levying land revenue on them? Therefore, my submission to the minister is that he should either take such measures to bring those lands under cultivation and give them necessary facilities or he should give some relief to those agriculturists by way of remission of land revenue.

My friend, Sri V. S. Patil, made one suggestion with regard to clause 6, which says that the expenditure incurred in this behalf will be charged on the consolidated fund of the State. I think there is some force in his contention also because the expenditure that is going to be incurred in this behalf in the direction of relief of famine should be open to vote by the Assembly. Therefore, there should be a specific fund created for this purpose and every care should be taken by this Assembly to see that even a pie that is spent is spent for the purpose for which it is set apart.

Mr. SPEAKER.—Please see clause 4, which says:

"Provided that when the Fund exceeds sixty lakhs of rupees, the State Government may utilise the excess to meet expenditure on protective minor irrigation works and other works as may be prescribed, for the prevention of famine in the State,......"

Sri D. PARAMESWARAPPA.—Even though the State Government were to make good the excess, that should also be open to discussion. That is my view. With these observations, I really welcome this Bill.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರ).—ಸ್ವಾಮಿ, ಮೈಸೂರು ರಾಜ್ಯದ 1962ನೇ ಇಸವಿ ಕ್ಷಾಮ ನಿವಾರಣೆಗೆ ಸಂಬಂಧಪಟ್ಟ ವಿಧೇಯಕವನ್ನು ನಾನು ಅನುಮೋದಿಸುತ್ತಾ ಎರಡು ಮಾತುಗಳನ್ನು ಆಡುತ್ತೇನೆ.

ನಮ್ಮ ದೇಶದಲ್ಲಿ ಒಂದು ಅಭಾವ ಪರಿಸ್ಥಿತಿ ಬರಬೇಕಾಗಿದ್ದರೆ, ಅದು ಮಳೆ ಅಭಾವ, ಬೆಂಕಿ, ಹೆಚ್ಚಿನ ಪ್ರವಾಹ, ಇತ್ಯಾದಿಗಳಿಂದ. ಇವುಗಳು ಆಗಿಂದಾಗ್ಗೆ ಬರುತ್ತಿರುವುದು ತಪ್ಪಿಲ್ಲ. ನಾವಾದರೂ ಈ ವಿಧೇಯಕವನ್ನು ಒಪ್ಪಿಕೊಂಡಿದ್ದಾಗ್ಯೂ ಇದನ್ನು ತಡೆಗಟ್ಟುವುದಕ್ಕೆ ಮುಂಜಾಗ್ರತೆ ಏನು ತೆಗೆದುಕೊಳ್ಳಬೇಕು ಎಂಬುದರ ವಿಚಾರದಲ್ಲಿ ಎರಡು ಮಾತು ಆಡುತ್ತೇನೆ.

ತಾವು, ಅಂದರೆ ಸ್ಪೀಕರ್‌ರವರು ತಿಳಿದಹಾಗೆ, 1922-23ನೇ ಇಸವಿಯಲ್ಲಿ ನೇತ್ರಾವತಿಯಿಂದ ಎರಡು ಕಡೆಗಳಲ್ಲಿ—ಪಾಣೆಮಂಗಳೂರು ಹಾಗೂ ಬಂಟವಾಳ, ನೀರಿನಲ್ಲಿ ಮುಳುಗಿ ಹೋಗಿದ್ದುದು ತಮ್ಮ ನೆನಪಿನಲ್ಲಿರಬಹುದು. ಕಾರಣ ಪಾಣೆಮಂಗಳೂರು ಸೇತುವೆ ಕಟ್ಟುವಾಗ ಅದರ ದಕ್ಷಿಣ ಭಾಗದಿಂದ ಪಾಣೆಮಂಗಳೂರವರೆಗೆ ಒಂದು ಮಡ್‌ರೋಡನ್ನು (ಅಪ್ರೋಚ್ ರೋಡ್) ಹಾಕಿದ್ದರಿಂದ ಹೆಚ್ಚಿನ ನೀರು ಕಟ್ಟೆಯಮೇಲೆ ಹೋಯಿತು. ಇದು ಪಿ.ಡಬ್ಲ್ಯು.ಡಿ. ಯವರು ಮಾಡಿದ ದೊಡ್ಡ ಅಪರಾಧ ಎಂದು ಹೇಳುತ್ತೇನೆ.

Mr. SPEAKER.—Extraordinary floods of 1923 alone.

Sri K. DEVIAH.—Not at all. It has been recurring every two or three years.

Mr. SPEAKER.—I was ignorant of it.

ಶ್ರೀ ಕೆ. ದೇವಯ್ಯ.—ಅಷ್ಟು ಮಾತ್ರವಲ್ಲ. ಇತ್ತೀಚೆಗೆ ಇನ್ನೊಂದು ಅಪ್ರೋಚ್ ರೋಡನ್ನು ಮಾಡುತ್ತಾ ಇದ್ದಾರೆ. ಇದಕ್ಕೆ ಬ್ರಿಡ್ಜಿನ ಎರಡು ಕಡೆಗಳಲ್ಲಿಯೂ ಸಾಕಷ್ಟು ವೆಂಟ್ ಇಟ್ಟು ಹೆಚ್ಚು ನೀರು ಹೋಗುವುದಕ್ಕೆ ಅವಕಾಶ ಕಲ್ಪಿಸಬೇಕು. ಕಂಬಗಳನ್ನು ನಡುವೆ ಹಾಕಿ ಆ ಸ್ಥಳದಿಂದ ನೀರಿನ ಪ್ರವಾಹವನ್ನು ತಡೆದು, ಮನೆಗಳಿಗೆ ಹೋಗುವುದಕ್ಕೆ ಅವಕಾಶವಿಲ್ಲದಂತೆ ಮಾಡದಿದ್ದರಿಂದ ಇದರ ಸ್ಪಾನುಗಳಷ್ಟು ಕಟ್ಟಿಣದ ಬ್ರಿಡ್ಜು ನೀರಿನಲ್ಲಿ ಮುಳುಗಿ ಹೋಯಿತು (1922ರ ಪ್ರವಾಹದಲ್ಲಿ) ಈಚೆಗೆ ಅದೇ ರೀತಿಯಾಗಿದೆ. ಆದ್ದರಿಂದ ನದಿ ದಡಗಳಲ್ಲಿರುವ ಪಟ್ಟಣಗಳು ನೀರಿನಲ್ಲಿ ಮುಳುಗಿ ಹೋಗದಹಾಗೆ ಇಂಥ ಸೇತುವೆಗಳನ್ನು ಕಟ್ಟುವಾಗ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಬೇಕಾದ್ದು ಬಹಳ ಮುಖ್ಯ ಕರ್ತವ್ಯ ಎಂದು ತಿಳಿಸಲು ಬಯಸುತ್ತೇನೆ.

ಎರಡನೆಯದಾಗಿ ಬೆಂಗಳೂರು, ಮೈಸೂರು ನಗರಗಳಲ್ಲಿ ವಾಸ ಮಾಡುವವರು ಬೆಂಕಿಯ ಅನಾಹುತವನ್ನು ತಪ್ಪಿಸುವುದಕ್ಕೆ ಮುಂಜಾಗ್ರತೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕಾರ್ಪೊರೇಷನವರಾಗಲೀ, ಸರ್ಕಾರದವರಾಗಲೀ ಇದನ್ನು ಬಹಳ ಮುಖ್ಯವಾಗಿ ಗಮನಿಸಬೇಕಾದ ವಿಚಾರ. ಕೆಲವು ವರ್ಷಗಳ ಹಿಂದೆ ಬೊಂಬು ಬಜಾರಿನಲ್ಲಿ ಬೆಂಕಿ ಬಿದ್ದು ಸಾವಿರಾರು ರೂಪಾಯಿಗಳ ಲುಕ್ಸಾನಾಗಿದೆ, ಆಗ ಎಷ್ಟೋ ಅಂಗಡಿಗಳು ಸುಟ್ಟು ಹೋದುವು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ಸುಮಾರು 1958ನೆಯ ಇಸವಿಯಲ್ಲಿ ಸರ್ಕಾರದಿಂದ 30 ಸಾವಿರ ರೂಪಾಯಿಗಳ ಎಸ್ಟಿಮೇಟ್ ಕಾರ್ಪೊರೇಷನ್ನಿಗೆ ಬಂದಿತ್ತು. ಅದರಲ್ಲಿ ಕೆಲವು hydrants ಇಟ್ಟುಕೊಳ್ಳಬೇಕೆಂದು ಸೂಚನೆ ಬಂದಿತ್ತು, ಇದನ್ನು ಪರಿಗಣಿಸಿಲ್ಲ. ಸರ್ಕಾರದವರೇ ಇದನ್ನು ಮಾಡಬೇಕು ಮತ್ತು ಈ ಫಂಡಿನಿಂದ ಹಣವನ್ನು ಕೊಡಬೇಕು, ಜನತೆಯ ಸೌಕರ್ಯವನ್ನು ನೋಡಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ. ಆ ದೃಷ್ಟಿಯಿಂದ ಈಗ ನಗರಗಳಲ್ಲಿ ಎಲ್ಲೆಲ್ಲಿ ಬಿದಿರಿನ ಸಾಮಾನು, ಮರದ ಸಾಮಾನುಗಳನ್ನು ಮಾರುತ್ತಾರೆಯೋ ಅವು ನಗರದ ಮಧ್ಯ ಭಾಗದಲ್ಲಿರುವುದರಿಂದ ಅವುಗಳನ್ನೆಲ್ಲ ಬೇರೆ ಕಡೆಗೆ ಸಾಗಿಸಿ, ಯೋಗ್ಯವಾದ ಸ್ಥಳವನ್ನು ನಿರ್ಮಿಸಿಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಇದರಿಂದ ಬೆಂಕಿ ಅನಾಹುತಗಳು ಏನು ಸಂಭವಿಸಬಹುದೋ ಅವು ತಪ್ಪುತ್ತವೆ ಎಂದು ನಾನು ಹೇಳುತ್ತೇನೆ.

(ಶ್ರೀ ಕೆ. ದೇವಯ್ಯ)

ನದಿಗಳ ಪಕ್ಕಗಳಲ್ಲಿ ಹೆಚ್ಚು ಆಹಾರವನ್ನು ಬೆಳೆಯುವ ದೃಷ್ಟಿಯಿಂದ, ನದಿಗಳ ಇಕ್ಕೆಡೆ ಗಳಲ್ಲಿಯೂ ಸಾಧ್ಯವಿದ್ದರೆ ರಸ್ತೆಗಳನ್ನು ನಿರ್ಮಿಸಿ- ವಿದ್ಯುಚ್ಛಕ್ತಿ ಲೈನನ್ನು ಹಾಕಿ, ಎಲ್ಲೆಲ್ಲಿ ವ್ಯವಸಾಯಕ್ಕೆ ಉಪಯೋಗವಾದ ವಿಸ್ತಾರವಾದ ಜಮೀನು ಸಿಕ್ಕುತ್ತದೆಯೋ ಅಲ್ಲಿ lift irrigation ಮಾಡಲು ಅವಕಾಶ ಕಲ್ಪಿಸಿ ಕೊಡಬೇಕು. ಇದರಿಂದ ಆಹಾರೋತ್ಪಾದನೆ ಜಾಸ್ತಿ ಯಾಗುತ್ತದೆ. ಇದನ್ನು ಕೂಡ ಪರಿಶೀಲನೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಬೇಡಿ ಕೊಳ್ಳುತ್ತೇನೆ.

ಇನ್ನೂ ಸಮುದ್ರ ಕರಾವಳಿಯಲ್ಲಿ, ಮೇ ತಿಂಗಳು 26ನೆಯ ತಾರೀಖಿನಿಂದ ಸೆಪ್ಟೆಂಬರ್ ತಿಂಗಳು 26ನೆಯ ತಾರೀಖಿನವರೆಗೆ ಮಂಗಳೂರು ರೇವು ಪಟ್ಟದಲ್ಲಿ ಯಾವ ಹಡಗುಗಳೂ ಬಂದು ನಿಲ್ಲುವುದಿಲ್ಲ. ಸಮುದ್ರವು ಉಕ್ಕಿ ಬಂದು ಬಹಳ ಹೆಚ್ಚಿನ ರೀತಿಯಲ್ಲಿ ತೆರೆಗಳು ಬಂದು ದಡಕ್ಕೆ ಬಡಿ ಯುತ್ತವೆ. ಅಲ್ಲಿ ವಾಸಮಾಡುವ fishermenಗೆ ವರ್ಷೇ ವರ್ಷೇ ಇವರಿಂದ ಅನಾಹುತವುಂಟಾಗು ತ್ತದೆ. ಇವರಿಗೆ ಪರಿಹಾರವನ್ನು ಕೊಡಬೇಕಾದ್ದು ಅಗತ್ಯ ಮತ್ತು ಅವಶ್ಯ ಮತ್ತುಗೂ ಅವರ ಮನೆ ಗಳನ್ನು ಎತ್ತರದ ಜಾಗದಲ್ಲಿ ಕಟ್ಟುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕು.

ಇಷ್ಟು ಹೇಳಿ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಮೈಸೂರು ದೇಶದಲ್ಲಿ Famine Relief Fund ಎಂದು ಸ್ಥಾಪನೆ ಮಾಡಬೇಕಾದರೆ ಅದಕ್ಕೆ ಒಂದು ಕಾನೂನು ಬೇಕು. ಹಿಂದೆ ಬೊಂಬಾಯಿ ಭಾಗ ದಲ್ಲಿತ್ತು, ಮದರಾಸು ಭಾಗದಲ್ಲಿತ್ತು, ಹೈದರಾಬಾದ್ ಭಾಗದಲ್ಲಿ ಒಂದು ಫರ್ಮಾನ್ ಮಾಡಿ ಖರ್ಚು ಮಾಡುತ್ತಿದ್ದರು. ಮೈಸೂರಿನಲ್ಲಿ ಒಂದು ಫಂಡ್ ಇತ್ತು. ಅವುಗಳಿಂದ ನಮಗೆ 57,39,300 ರೂಪಾಯಿ ಬಂದಿದೆ. ಹಿಂದಿನ ಮೈಸೂರಿನಿಂದ 20,24,600 ರೂಪಾಯಿ, ಬೊಂಬಾಯಿಯಿಂದ 30,40,500 ರೂಪಾಯಿ ಮತ್ತು ಹೈದಾರಾಬಾದಿನಿಂದ 6,74,200 ರೂಪಾಯಿ ಬಂದಿದೆ. ಮದ್ರಾಸ್ ವಿಷಯದಲ್ಲಿ ಹಿಂದೆಯೇ ಏನೋ cash adjustment ಮಾಡಿಕೊಂಡಿದ್ದಾರೆ. ಆಗಿನ ಸರ್ಕಾರದವರು ತೆಗೆದುಕೊಂಡು ಖರ್ಚುಮಾಡಿರಬೇಕು ಎಂದು ಕಾಣುತ್ತದೆ. ಈಗ 57,39,300 ರೂಪಾಯಿ ಮಾತ್ರ ಉಳಿದಿದೆ. ಅದರ ಜೊತೆಗೆ Second Finance Commission ನವರು ಪ್ರತಿಯೊಂದು ಸಂಸ್ಥಾನದಲ್ಲಿಯೂ ಹಿಂದಿನ ಐದಾರು ವರ್ಷಗಳಲ್ಲಿ ಕ್ಷಾಮ ಪರಿಹಾರಕ್ಕಾಗಿ ಖರ್ಚು ಮಾಡಿರುವ ಹಣದ ಲೆಕ್ಕ ತೆಗೆದುಕೊಂಡು, ಅದರ ಸರಾಸರಿ ತೆಗೆದುಕೊಂಡು ಇಷ್ಟು ಹಣವನ್ನು ಪ್ರತಿ ವರ್ಷವೂ ಬಡ್ಜೆಟ್ಟಿನಲ್ಲಿ ತೆಗೆದಿಡಬೇಕೆಂದು ಮಾಡಿದ್ದಾರೆ. ಹಿಂದೆ ಯಾರ ಕೂಗು ಹೆಚ್ಚಾಗಿತ್ತೋ ಅವರಿಗೆ ಹೆಚ್ಚು ಸಹಾಯ ಕೊಡುವ ಪರಿಸ್ಥಿತಿ ಇತ್ತು. ಆದರೆ ಎರಡನೆಯ ಫೈನಾನ್ಸ್ ಕಮೀಷನ್ ನವರು ಪ್ರತಿ ರಾಜ್ಯ ಸರ್ಕಾರವೂ ಕ್ಷಾಮ ಪರಿಹಾರಕ್ಕಾಗಿ ಒಂದು ಫಂಡ್ ಮಾಡಬೇಕೆಂದು ತಿಳಿಸಿ ರುವ ಪ್ರಕಾರ ಮೈಸೂರು ಸರ್ಕಾರವು ಕ್ಷಾಮವಿರಲಿ, ಇಲ್ಲದೆ ಇರಲಿ, 30 ಲಕ್ಷ ರೂಪಾಯಿಗಳನ್ನು ವರ್ಷೇ ವರ್ಷೇ ಪ್ರತ್ಯೇಕವಾಗಿ ಇಡಬೇಕು. ಕ್ಷಾಮ ಪರಿಸ್ಥಿತಿ ಬಂದರೆ ಈ ಮೊದಲು ಈ ಹಣವನ್ನು ಖರ್ಚುಮಾಡಿ ಅನಂತರ ಕೇಂದ್ರ ಸರ್ಕಾರದ ಬಳಿ ಸಹಾಯಕ್ಕೆ ಬನ್ನಿ ಎಂದು ಹೇಳುತ್ತಾರೆ. ಒಂದು ಸ್ಕೇಲ್ ಪ್ರಕಾರ ನಾವು ಕೊಡುತ್ತೇವೆಂದು ಹೇಳುತ್ತಾರೆ. ಆ ದೃಷ್ಟಿಯಿಂದ ಮೈಸೂರು ಸರ್ಕಾರ ವರ್ಷೇ ವರ್ಷೇ 30 ಲಕ್ಷ ರೂಪಾಯಿಗಳನ್ನು ತೆಗೆದಿಡಬೇಕಾಗಿದೆ. ಹಿಂದಿನದು ನಮ್ಮ ಹತ್ತಿರ ಉಳಿದಿರುವ 57 ಲಕ್ಷ ರೂಪಾಯಿಗಳ ಜೊತೆಗೆ 30 ಲಕ್ಷ ರೂಪಾಯಿ ಸೇರಿಸಿ ಒಂದು ಫಂಡ್ ಮಾಡುತ್ತೇವೆ. ಈ ಕಾನೂನು ಜಾರಿಗೆ ಬಂದ ತಕ್ಷಣ ಅದನ್ನು protective worksಗೆ ಖರ್ಚು ಮಾಡುವುದಕ್ಕೆ ಅಸ್ಪದವಿರುತ್ತದೆ.

ಶ್ರೀ ಎ. ಕೃಷ್ಣ ಶೆಟ್ಟರು ಮಾತನಾಡುತ್ತ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾವಿಗಳ ಉಪಯೋಗ ಬಹಳವಿದೆ ಎಂದು ಹೇಳಿದರು. ಬಾವಿಗಳ ಉಪಯೋಗ ಅನೇಕ ಕಡೆ ಇದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲೂ ಇದೆ. ಅಲ್ಲಿ ಈಗಾಗಲೇ pumpset ಕೊಡುವ ಒಂದು ಯೋಜನೆ ಇದೆ. ಮಾನ್ಯ ಅಧ್ಯಕ್ಷರೂ ಕೂಡ, ಹಿಂದೆ ನಾನು ಕೇಂದ್ರದಲ್ಲಿದ್ದಾಗ ಟೆನೆಸಿ ವ್ಯಾಲಿ ಸ್ಕೀಂ ಇದ್ದ ಹಾಗೆ ಒಂದು blueprint ತಯಾರುಮಾಡಿ ಅಲ್ಲಿ ಎಷ್ಟು ಪಂಪ್‌ಸೆಟ್‌ಗಳನ್ನು ಹಾಕಬೇಕು, lift irrigationಗೆ ಅವಕಾಶ ಮಾಡಿಕೊಡಬೇಕು, ಎಂದು ಒಂದು ಯೋಜನೆಯನ್ನು ತಯಾರಿಸಿ ಇಟ್ಟಿ ದ್ದಾರೆ. ಮಲೆನಾಡಿನಲ್ಲಿ ಮಳೆ ಬಿದ್ದ ಮಾತ್ರಕ್ಕೆ ಅಲ್ಲಿ ಅಥವಾ ಕರಾವಳಿ ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಬರುವುದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಎಲ್ಲಿ ನಾಲ್ಕಾಣೆಗಿಂತ ಕಡಮೆ ಬೆಳೆಯಾಗು ತ್ತದೆ ಅಲ್ಲಿ ಅಭಾವ ಶುರುವಾಗುತ್ತದೆ. ಅಂಥ ಸ್ಥಳಗಳಲ್ಲಿ lift ಇರಿಗೇಷನಿಂದ ಬಹಳ ಅನುಕೂಲ ವಾಗುತ್ತದೆ. ಕೆಲವು ಬಾವಿಗಳನ್ನು ಅಗೆದು, ಪಂಪ್‌ಸೆಟ್ ಹಾಕಿಕೊಂಡು ವ್ಯವಸಾಯ ಮಾಡ ಬೇಕಾಗುತ್ತದೆ ಮತ್ತು ಹುಲ್ಲನ್ನು ಸಹ ಬೆಳೆಯಬಹುದು. ಇದರಿಂದ ಪಶುಗಳು ಹಾಲನ್ನು

ಹೆಚ್ಚಾಗಿ ಕೊಡುತ್ತವೆ. ಮಲೆನಾಡಿನಲ್ಲಿ ಪಶುಗಳಿಗೆ ಆಹಾರವಿಲ್ಲದೆ ಹಾಲು ಹೆಚ್ಚಾಗಿ ಸಿಕ್ಕುತ್ತಿಲ್ಲ. ಆ ದೃಷ್ಟಿಯಿಂದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಾವಿಗಳನ್ನು ತೋಡಲು ಮಂಜೂರಾಗಬೇಕು. ಈಗ ಪ್ರಾಯೋಗಿಕವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನೂರು ಬಾವಿಗಳನು ತೆಗೆಸಲು ಮಂಜೂರಾತಿಯನ್ನು ಕೊಟ್ಟಿದ್ದೇವೆ. ಅದು ಯಶಸ್ವಿಯಾದರೆ ದಕ್ಷಿಣ ಕನ್ನಡ ಜಿಲ್ಲೆಗೂ ವಿಸ್ತರಿಸುತ್ತೇವೆ. ಈಗ ಉತ್ತರ ಕನ್ನಡ ಜಿಲ್ಲೆಗೂ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಇಷ್ಟು ಹೇಳಿ ಈ ವಿಧೇಯಕದ ಮೂಲ ಉದ್ದೇಶ ಒಂದು fund create ಮಾಡುವುದು, ಅದು ಮೂಲ ಧನವಿದ್ದ ಹಾಗೆ. ಅದರ ಮೇಲೆ ಎಷ್ಟು ಬೇಕಾದರೂ ಖರ್ಚುಮಾಡಬಹುದು ಎನ್ನುವ ಉದ್ದೇಶದಿಂದ ಇದನ್ನು ತಂದಿದೆ. ಅದಕ್ಕೆ ಮಾನ್ಯ ಸದಸ್ಯರು ಒಪ್ಪುತ್ತಾರೆಂದು ಕಾಣುತ್ತದೆ

Sri N. O. SAMAJI.—(Marathi)

Mr. SPEAKER.—I will put the motion to the vote of the House

Sri G. V. GOWDA.—Clause 6 envisages that any deficiency in this Fund should be made up by the Government charging the same to the Consolidated Fund. Though it is not a case of recurring expenditure, it is still an expenditure. Finance memorandum is necessary.

Mr. SPEAKER.—It is not an expenditure in that sense. If there is any expenditure under this head, it will come up during the Budged discussion.

Sri G. V. GOWDA.—Government has to take it from the Consolidated Fund and pass it to the particular Fund. So Government incurs an expenditure in the sense that the amount is drawn and transferred to that particular Fund.

Sri B. D. JATTI.—At the time of framing the Budget, if there is a shortfall of Rs. 10 lakhs, that will be brought before the House.

Mr. SPEAKER.—I will put the motion to the vote of the House.

The question is:

"That the Mysore Famine Relief Fund Bill, 1962, be taken into consideration."

The motion was adopted.

Mr. SPEAKER.—Clauses 2 to 7, both inclusive.

The question is:

"That clauses 2 to 7, both inclusive, stand part of the Bill."

The motion was adopted.

Clauses 2 to 7, both inclusive, were added to the Bill.

Mr. SPEAKER.—Clause 1, the Title and the Preamble.

The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass

Sri M. V. KRISHNAPPA.—Sir, I move:

"That the Mysore Famine Relief Fund Bill, 1962, be passed."

Mr. SPEAKER.—The question is:

"That the Mysore Famine Relief Fund Bill, 1962, be passed"

The motion was adopted.

5-30 P.M.

MYSORE PRISONS BILL, 1962.

Motion to consider.

(*Debate continued.*)

Mr. SPEAKER.—The Mysore Prisons Bill may be taken now. The time allotted for this Bill is 210 minutes of which 105 minutes have already been spent and five members have participated and the fifth member has already taken 20 minutes. Therefore, I would request the fifth member to conclude expeditiously

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಬಂದೀಖಾನೆ ವಿಷಯದಲ್ಲಿ ಈ ಮಸೂದೆಯೊಳಗೆ ಏನೇನೂ ಇಲ್ಲ. ಇನ್ನೊಂದು ಕಾನೂನು ತೆಗೆದುಕೊಂಡು ಕಾಪಿ ಮಾಡಿದ ಹಾಗೆ ಇದೆ. 1941ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಿಜನ್ ರಿಫಾರ್ಮ್ಸ್ ಯಾವ ರೀತಿ ಮಾಡಬೇಕು ಎಂಬುದಕ್ಕೆ ಒಂದು ಕಮಿಟಿ ನೇಮಕ ಮಾಡಿದ್ದರು. ಅವರು ಒಂದು ಗಹನವಾದ ರಿಪೋರ್ಟನ್ನು ಕೊಟ್ಟಿದ್ದಾರೆ. ಆ ರಿಪೋರ್ಟಿನಲ್ಲಿ ಹೇಳಿದ ಅಂಶಗಳು ಈ ಮಸೂದೆಯಲ್ಲಿ ಕಾಣುವುದಿಲ್ಲ. ಬಂದಿಯನ್ನು ಹೇಗೆ ಹಿಡಿದುಕೊಂಡು ಬರಬೇಕು, ಜೇಲರ್ ಹೇಗೆ ಇರಬೇಕು, ಏನು ಕೆಲಸ ಕೊಡಬೇಕು ಪರೋಲ್ ಮೇಲೆ ಬಿಡುವುದು ಹೇಗೆ ಇಷ್ಟೇ ಇದೆ. ಡಾಯೆಟ್ ಹೇಗೆ ಇರಬೇಕು, ಬಟ್ಟೆ ಎಂಥದು ಕೊಡಬೇಕು ಯಾವ ಕೆಲಸ ತೆಗೆದುಕೊಳ್ಳಬೇಕು, ಬಂದಿ ಹೊರಗೆ ಹೋದ ಮೇಲೆ ರಿಹ್ಯಾಬಿಲಿಟೇಟ್ ಹೇಗೆ ಮಾಡಬೇಕು ಎಂಬ ಬಗ್ಗೆ ಒಂದು ಪದ ಕೂಡ ಇದರಲ್ಲಿ ಇಲ್ಲ. ಇಂಥ ಕಾನೂನನ್ನು ಶಾಸನ ಕಡಿತಕ್ಕೆ ಏತಕ್ಕೆ ಏರಿಸುತ್ತೀರಿ ಎಂದು ಕೇಳುತ್ತೇನೆ. ಈ ಮಸೂದೆಯ ಉದ್ದೇಶವೇನು? ಜೇಲ್ ರಿಫಾರ್ಮ್ ಮಾಡಿ ಸಮಾಜದಲ್ಲಿ ಒಳ್ಳೆಯದು ಆಗಬೇಕೆಂದು ಮಾಡುತ್ತೀರಾ? ಕೈದಿಯು ಸತ್ಪ್ರಜೆಯಾಗುವ ಹಾಗೆ ಈ ಬಿಲ್ಲಿನಲ್ಲಿ ಏನಾದರೂ ಅಡಕವಾಗಿದೆಯೋ ಎಂದರೆ ಅಂಥಾದ್ದು ಏನೇನೂ ಇಲ್ಲ. 1941ರಲ್ಲಿ ನೇಮಕ ಮಾಡಲಾಗಿದ್ದ ರಿಫಾರ್ಮ್ಸ್ ಕಮಿಟಿಯವರು ತಮ್ಮ ವರದಿಯಲ್ಲಿ ಈ ವಿಷಯವನ್ನು ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಎಂಥ ಬಟ್ಟೆ, ಯಾವ ಡಾಯೆಟ್, ಯಾವ ಕೆಲಸ ಮಾಡಬೇಕು, ರಿಹ್ಯಾಬಿಲಿಟೇಟ್ ಹೇಗೆ ಮಾಡುವುದು ಇವೆಲ್ಲಾ ಆ ರಿಪೋರ್ಟಿನಲ್ಲಿವೆ.

Sri B. D. JATTI.—After the receipt of the Report, after 1942, Government has accepted a number of recommendations and they have also passed orders. There are number of Government Orders. If the Hon'ble Member cares to go through the G.Os., he will not criticise

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರು ಮುಖ್ಯ ಮಂತ್ರಿಗಳಾದ ಮೇಲೆ, ಪ್ರಿಜನ್ಸ್ ಇವರ ಅಧಿಕಾರಕ್ಕೆ ಬಂದ ಮೇಲೆಯಾದರೂ ಇವರು ಈ ವರದಿಯನ್ನು ಓದಿದ್ದಾರೆಯೋ? ಇಂಥ ಗೌರ್ನಮೆಂಟ್ ಆರ್ಡರ್ ಮಾಡಿದ್ದೇವೆ, ಇಂಥ ರೆಕಮೆಂಡೇಷನ್ಸ್ ಇಂಪ್ಲಿಮೆಂಟ್ ಮಾಡಿದ್ದೇವೆ ಎಂಬುದನ್ನು ಒಂದು ಪುಸ್ತಕ ಮಾಡಿ ನಮಗೆ ಕೊಟ್ಟರೆ ಒಳ್ಳೆಯದು. ಆದರೆ ಬರೀ ಮಾತಾಡಿ ಬಿಡುತ್ತಾರೆ ಎಂದು ಹೇಳುತ್ತೇನೆ. ಇಂಥಾದ್ದು ಮಾತನಾಡಿದರೆ ಏನೂ ಪ್ರಯೋಜನವಿಲ್ಲ. ಇದು ಹೇಗಿದೆ ಎಂದರೆ, 'ಅತ್ತೆ ಅಟ್ಟಕ್ಕೆ [illegible]ರು ಎಂದು ಹೇಳಿದರೆ ಮಾವ ಕೆಳಕ್ಕೆ ಹಾರಲು ಹೇಳಿದ' ಇನ್ನ ಗಾದೆಯ ಹಾಗೆ ಆಗಿದೆ. ಈ ಮಸೂದೆಯಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ಅ[illegible] ಓದಿಕೊಂಡು ಬಂದಿದ್ದೇನೆ. ಆ ರಿಪೋರ್ಟಿನಲ್ಲಿ ಯಾವ ಯಾವ ರಿಫಾರ್ಮ್ಸ್ ಜಾರಿ[illegible] [illegible]ಸ್ವಾರ,